ಒಂದು ನಿಂಬೆ ಹಣ್ಣಿನ ಬೆಲೆ 10 ರೂ. | ರಾಜ್ಯದಲ್ಲಿ 21,660 ಹೆಕ್ಟೇರ್‌ನಲ್ಲಿ ನಿಂಬೆ ಬೆಳೆ

ನಿಂಬೆ ಬೆಲೆ ಏರಿಕೆ: ನಿಬ್ಬೆರಗಾದ ಗ್ರಾಹಕ

■ **ವೆಂಕಟೇಶ ಏಗನೂರು** ಕಲಬುರಗಿ
Venkatesh.narasappa@timesofindia.com
■ **ವಿನಾಯಕ ಪೂಜಾರ** ದಾವಣಗೆರೆ
pujardvg@gmail.com

ಬಿರು ಬೇಸಿಗೆಯಲ್ಲೇ ನಿಂಬೆ ಹಣ್ಣಿನ ದರ ಗಗನಕ್ಕೆ ಏರಿದ್ದರಿಂದ ಗ್ರಾಹಕನ ಜೇಬಿಗೆ ಕತ್ತರಿ ಬೀಳುತ್ತಿದೆ.

ಸಾಮಾನ್ಯವಾಗಿ ಬೇಸಿಗೆಯಲ್ಲಿ ನಿಂಬೆಹಣ್ಣಿಗೆ ಭಾರಿ ಡಿಮ್ಯಾಂಡ್ ಇರುತ್ತದೆ. ತಿಂಗಳ ಹಿಂದೆ 5 ರೂ.ಗೆ ಮಾರಾಟವಾಗುತ್ತಿದ್ದ ಒಂದು ನಿಂಬೆ ಹಣ್ಣು ಈಗ 10 ರೂ. ಆಗಿದೆ. ಈ ಹಿನ್ನೆಲೆಯಲ್ಲಿ ಗ್ರಾಹಕರು ನಿಬ್ಬೆರಗಾಗುತ್ತಿದ್ದಾರೆ. ಸಗಟಾಗಿ ಖರೀದಿಸಿದರೆ ಒಂದು ನಿಂಬೆಗೆ 8 ರೂ.ನಂತೆ ಮಾರಾಟ ಆಗುತ್ತಿದೆ. ಜ್ಯೂಸ್ ಅಂಗಡಿಯವರು ಈ ರೀತಿ ಖರೀದಿ ಮಾಡುತ್ತಾರೆ.

ಉತ್ತರ ಭಾರತಕ್ಕೆ ಪೂರೈಕೆ: ಕಲಬುರಗಿ ಜಿಲ್ಲೆಯಲ್ಲಿ 1,100 ಹೆಕ್ಟೇರ್ ಪ್ರದೇಶ ಸೇರಿದಂತೆ ರಾಜ್ಯದ ವಿಜಯಪುರ, ಇಂಡಿ, ಕೊಪ್ಪಳ, ಬಾಗಲಕೋಟೆ ಜಿಲ್ಲೆಗಳ

ದಾವಣಗೆರೆಯ ಕೆ.ಆರ್. ಮಾರುಕಟ್ಟೆಯಲ್ಲಿ ನಿಂಬೆ ಹಣ್ಣು ಮಾರಾಟ ಮಾಡುತ್ತಿರುವ ವ್ಯಾಪಾರಿ.

21,660 ಹೆಕ್ಟೇರ್‌ನಲ್ಲಿ ಬೆಳೆ ನಿಂಬೆ ಬೆಳೆಯುತ್ತಾರೆ. ಬೇಸಿಗೆಯಲ್ಲಿ ನಿಂಬೆ ಬೆಳೆಯಲ್ಲಿ ಸಿಂಹಪಾಲು ಹೊಂದಿರುವ ವಿಜಯಪುರದ ಖಾಗಜಿ ತಳಿಯ ನಿಂಬೆ ಹಣ್ಣಿಗೆ ಉತ್ತರ ಭಾರತಕ್ಕೆ ಹೆಚ್ಚು ಸರಬರಾಜು ಆಗುತ್ತಿದೆ. ಹಾಗಾಗಿ, ಬೇಡಿಕೆಗೆ ಅನುಗುಣವಾಗಿ

ಮಾರುಕಟ್ಟೆಯಲ್ಲಿ ನಿಂಬೆ ಹಣ್ಣು ಹೆಚ್ಚು ಸಿಗುತ್ತಿಲ್ಲ. 100 ನಿಂಬೆ 800 ರೂ.ಗೆ ನಮಗೇ ಸಿಗುತ್ತಿವೆ. ಈ ಹಿನ್ನೆಲೆಯಲ್ಲಿ ಗ್ರಾಹಕರಿಗೆ 10 ರೂ.ಗೆ ಒಂದು ಮಾರಾಟ ಮಾಡಬೇಕಾಗುತ್ತದೆ. ಚಿಕ್ಕ ನಿಂಬೆಯಲ್ಲಿ ಹೆಚ್ಚು ರಸ ಇರದೇ ಇರುವುದರಿಂದ ಗ್ರಾಹಕರು ತೆಗೆದುಕೊಳ್ಳಲ್ಲ.
- ದೇವೇಂದ್ರ ವರ್ತಕ, ಕಲಬುರಗಿ

ಬೇಸಿಗೆ ಕಾಲದಲ್ಲಿ ನಿಂಬೆ ಇಳುವರಿ ಕಡಿಮೆ ಇರುತ್ತದೆ. ವರ್ಷದ ಮೂರು ಫಸಲುಗಳಲ್ಲಿ ಬೇಸಿಗೆಯಲ್ಲಿ ರೈತರಿಗೆ ಉತ್ತಮ ದರ ಸಿಗುತ್ತದೆ. ಬೇಸಿಗೆಯಲ್ಲಿ ಹೆಚ್ಚು ಬೇಡಿಕೆ ಇರುವುದರಿಂದ ಸಾಮಾನ್ಯವಾಗಿ ಬೆಲೆ ಹೆಚ್ಚಾಗುತ್ತದೆ.
- ಸಂತೋಷ ಇನಾಮದಾರ್ ಉಪನಿರ್ದೇಶಕ, ತೋಟಗಾರಿಕೆ ಇಲಾಖೆ ಕಲಬುರಗಿ

ಕರ್ನಾಟಕದಲ್ಲಿ ನಿಂಬೆ ಸಿಗದಿರುವುದೇ ಬೆಲೆ ಹೆಚ್ಚಳಕ್ಕೆ ಕಾರಣವಾಗಿದೆ. ಬೇಸಿಗೆಯಲ್ಲಿ ಮಾತ್ರ ರೈತರಿಗೆ ಸ್ವಲ್ಪ ಉತ್ತಮ ಬೆಲೆ ಸಿಗುತ್ತದೆ.

ಚೀಲದ ದರ 10 ಸಾವಿರ ರೂ.ಗೆ ಏರಿಕೆ

ದಾವಣಗೆರೆ ಮಾರುಕಟ್ಟೆಗೆ ಮೊದಲು ವಾರಕ್ಕೆ ಒಂದು ಸಾವಿರ ಚೀಲ ನಿಂಬೆ ಆವಕವಾಗುತಿತ್ತು. ಆದರೆ, ಈಗ 400ರಿಂದ 500 ಚೀಲವೂ ಬರುತ್ತಿಲ್ಲ ಎನ್ನುತ್ತಾರೆ ನಿಂಬೆ ಹಣ್ಣಿನ ಸಗಟು ವ್ಯಾಪಾರಿಗಳು. ಸಗಟು ಮಾರುಕಟ್ಟೆಯಲ್ಲಿ ಕೆಲ ತಿಂಗಳ ಹಿಂದಷ್ಟೇ ಉತ್ತಮ ಗಾತ್ರ ಮತ್ತು ಗುಣಮಟ್ಟದ 1,200ರಿಂದ 1,500 ಹಣ್ಣು ಇರುವ ನಿಂಬೆಯ ಒಂದು ಚೀಲಕ್ಕೆ 1,500 ರೂ. ದರ ಇತ್ತು. ಆದರೆ, ಈಗ 8ರಿಂದ 10 ಸಾವಿರ ರೂ. ಬೆಲೆ ಇದೆ. ಮಧ್ಯಮ ಗಾತ್ರದ ಹಣ್ಣಿನ ಒಂದು ಚೀಲಕ್ಕೆ 6 ಸಾವಿರ ರೂ., ಹಿಂಡಿದರೂ ರಸ ಬಾರದ ನಿಂಬೆಯ ಚೀಲಕ್ಕೆ 4 ಸಾವಿರ ರೂ. ಇದೆ.

15 ವರ್ಷಗಳಿಂದ ನಿಂಬೆ ಹಣ್ಣು ವ್ಯಾಪಾರ ಮಾಡುತ್ತಿದ್ದೇನೆ. ಒಂದು ಚೀಲ ನಿಂಬೆ ಹಣ್ಣಿಗೆ 10 ಸಾವಿರ ರೂ. ನಿಗದಿ ಆಗಿರುವುದು ನೋಡಿಯೇ ಇಲ್ಲ. ಹೀಗೆ ಬೆಲೆ ಏರಿಕೆಯಾದರೆ ವ್ಯಾಪಾರ ಮಾಡುವುದು ಕಷ್ಟ.
- ವಾಸೀಂ ನಿಂಬೆ ಹಣ್ಣು ಚಿಲ್ಲರೆ ವ್ಯಾಪಾರಿ, ದಾವಣಗೆರೆ

ಕೊಡಗು ಜಿಲ್ಲೆ ವಿಕ ಸೂಪರ್ ಸ್ಟಾರ್ ರೈತರು

ಕೊಡಗು ಜಿಲ್ಲೆ ಸುಂಟಿಕೊಪ್ಪದಲ್ಲಿ ಬುಧವಾರ ನಡೆದ ವಿಕ ಸೂಪರ್ ಸ್ಟಾರ್ ರೈತ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಗತಿಪರ ರೈತರಾದ ಕುಶಾಲನಗರ ತಾಲೂಕು ಚಿಕ್ಕನಾಯಕನ ಹೊಸಳ್ಳಿ ಗ್ರಾಮದ ಶೇಷಪ್ಪ ಟಿ.ಜೆ., ಸೋಮವಾರಪೇಟೆ ತಾಲೂಕು ಸಿದ್ದಾಪುರ ಗ್ರಾಮದ ಕೆ.ಜಿ.ಚೇತನ್, ಮಡಿಕೇರಿ ತಾಲೂಕು ತಣ್ಣೀಮಾನಿ ಗ್ರಾಮದ ಹರ್ಷ ಡಿ.ಎನ್, ವಿರಾಜಪೇಟೆ ತಾಲೂಕು ಬಿಳುಗುಂದ ಗ್ರಾಮದ ವಿಷ್ಣು ಪಿ.ಎಸ್., ಪೊನ್ನಂಪೇಟೆ ತಾಲೂಕು ಕಾನೂರು ಗ್ರಾಮದ ಸಿ.ಬಿ.ಮಾಯಮ್ಮ ಅವರಿಗೆ 2025-26ನೇ ಸಾಲಿನ ವಿಕ ಸೂಪರ್ ಸ್ಟಾರ್ ರೈತ ಪುರಸ್ಕಾರ ನೀಡಿ ಗೌರವಿಸಲಾಯಿತು. ತೋಟಗಾರಿಕಾ ಇಲಾಖೆ ಉಪನಿರ್ದೇಶಕ ಶಶಿಧರ್, ಸುಂಟಿಕೊಪ್ಪ ಕೊಡವ ಸಮಾಜದ ಕಾರ್ಯದರ್ಶಿ ಅಜ್ಜಿಕುಟ್ಟಿರ ಗಿರೀಶ್, ಪಶುಪಾಲನೆ ಮತ್ತು ಪಶು ವೈದ್ಯಕೀಯ ಇಲಾಖೆ ಉಪನಿರ್ದೇಶಕ ಡಾ.ಲಿಂಗರಾಜು ದೊಡ್ಡಮನಿ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಪುರುಷೋತ್ತಮ, ಸುಂಟಿಕೊಪ್ಪ ಕೊಡವ ಸಮಾಜದ ಹಿರಿಯ ನಿರ್ದೇಶಕ ಪುಡಿಯಂಡ ಮುತ್ತಣ್ಣ, ಮಡಿಕೇರಿ ತಾಪಂ ಕಾರ್ಯನಿರ್ವಹಣಾಧಿಕಾರಿ ಶೇಖರ್ ಇದ್ದರು.

ಅಗ್ನಿ ಅವಘಡ ತಪ್ಪಿಸುವ ಎಐ

ವಿಕ AI ಲೋಕ

ಅಗ್ನಿ ಅವಘಡದಿಂದ ಆಗುತ್ತಿರುವ ಹಾನಿಗಳನ್ನು ಲೆಕ್ಕಾಚಾರದ ಮೂಲಕ ನಮಗೆ ಯಾರೂ ಹೇಳಬೇಕಿಲ್ಲ. ದಿನಾ ಬೆಳಗ್ಗೆ ದಿನಪತ್ರಿಕೆಯನ್ನು ತೆಗೆದು ಓದಿದರೆ ಸಾಕು ಎರಡಾದರೂ ಕಣ್ಣಿಗೆ ಬೀಳುತ್ತದೆ. ಇದನ್ನು ತಪ್ಪಿಸುವುದು ಸಾಧ್ಯವಿಲ್ಲವೇ? ಹೋಟೆಲ್‌ಗಳಲ್ಲಿ 'ಫೈರ್ ಅಲಾರಾಂ' ಅಳವಡಿಸಿರುತ್ತಾರೆ, ಇತ್ತೀಚೆಗೆ ಕೆಲವು ಅಪಾರ್ಟ್‌ಮೆಂಟ್ ಸಂಕೀರ್ಣಗಳಲ್ಲಿ ಕೂಡ ಈ ಸೌಲಭ್ಯಗಳನ್ನು ನೋಡಬಹುದು, ಆದರೂ ಯಾಕೆ ಅಗ್ನಿ ಅವಘಡಗಳು ಕಡಿಮೆ ಆಗುತ್ತಿಲ್ಲ? ಕ್ಯಾಮೆರಾ ಹಾಗೂ ಮೆಷಿನ್ ಲರ್ನಿಂಗ್ ತಂತ್ರಜ್ಞಾನದ ಮೂಲಕ ಬೆಂಕಿಯನ್ನು ತಕ್ಷಣವೇ ಗುರುತಿಸಿ ನಂದಿಸಲು ಸಾಧ್ಯವೆಂದು ಜಗತ್ತಿನ ಕೆಲವು ಕಡೆ ಪ್ರಯೋಗಗಳನ್ನು ಮಾಡಿ ಕಂಡುಕೊಂಡಿದ್ದಾರೆ. ಇದು ಕಂಪ್ಯೂಟರ್ ವಿಷನ್ ಆಧಾರದ ಮೇಲೆ ಕೆಲಸ ಮಾಡುವಂತಹದ್ದು. ಡೀಪ್ ಲರ್ನಿಂಗ್ ಮುಖಾಂತರ ಅಗ್ನಿ ಅವಘಡದ ಲಕ್ಷಾಂತರ ಘಟನೆಗಳನ್ನು ಎಐ ಮಾದರಿಗೆ ಕಲಿಸಿ ಬೆಂಕಿಯು ಕಾಣಿಸಿದಾಗ ಅದನ್ನು ಗುರುತಿಸಿ ತಕ್ಷಣವೇ ತಕ್ಕನಾದ ಕ್ರಮ ಕೈಗೊಳ್ಳಲು ಸಹಾಯ ಮಾಡುತ್ತದೆ ಈ ತಂತ್ರಜ್ಞಾನ. ಪ್ರಯೋಗಗಳು ತೋರಿಸಿರುವ ಹಾಗೆ ಕೇವಲ 30 ಸೆಕೆಂಡ್‌ಗಳಲ್ಲಿ ಬೆಂಕಿ ಹತ್ತಿದ್ದನ್ನು ಕಂಡುಹಿಡಿಯಬಹುದಂತೆ!

ಸ್ಕ್ಯಾನ್ ಮಾಡಿ ಎಐ ಕುರಿತು ಪ್ರಶ್ನೆ ಕೇಳಿ

■ **ವಿಕ್ರಂ ಜೋಶಿ** ಎಐ ವಿಶ್ಲೇಷಕರು

ಉಪರಾಷ್ಟ್ರಪತಿ ರಾಧಾಕೃಷ್ಣನ್ ಮೆಚ್ಚುಗೆ | ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ

ಪಟ್ಟದ್ದೇವರ ಪ್ರತಿ ಕಾರ್ಯವೂ ಮಾನವತೆಗೆ ಸಮರ್ಪಣೆ

■ **ವಿಕ ಸುದ್ದಿಲೋಕ** ಭಾಲ್ಕಿ (ಬೀದರ್)

ಭಾಲ್ಕಿ ಹಿರೇಮಠ ಸಂಸ್ಥಾನದ ಡಾ.ಬಸವಲಿಂಗ ಪಟ್ಟದ್ದೇವರು ನಿಸ್ವಾರ್ಥ ಸೇವೆಯ ಜೀವನ ನಡೆಸಿ ಪ್ರತಿಯೊಂದು ಕ್ಷಣವನ್ನೂ ಸಮಾಜದ ಕಲ್ಯಾಣ ಮತ್ತು ಮಾನವತೆಯ ಉದ್ಧಾರಕ್ಕೆ ಸಮರ್ಪಿಸಿದ್ದಾರೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಬಣ್ಣಿಸಿದರು.

ಇಲ್ಲಿನ ಚನ್ನಬಸವಾಶ್ರಮದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಸಂಸ್ಥೆಯ ಸಂಸ್ಥಾಪಕ ಮತ್ತು ಬಸವಕಲ್ಯಾಣದ ಅನುಭವ ಮಂಟಪ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಸಮಾರಂಭವನ್ನು ಬುಧವಾರ ಉದ್ಘಾಟಿಸಿ ಮಾತನಾಡಿದರು.

''ಪಟ್ಟದ್ದೇವರು ತಮ್ಮ ಜನ್ಮದಿನವನ್ನು ಆಚರಿಸಿಕೊಳ್ಳುವುದಿಲ್ಲ ಆಶ್ರಯದಲ್ಲಿರುವ ಸುದೈವಿ ಮಕ್ಕಳ ಕಲ್ಯಾಣಕ್ಕೆ ಆ ದಿನವನ್ನು ಸಮರ್ಪಿಸಿದ್ದಾರೆ. ಅವರು ಕೇವಲ ಆಧ್ಯಾತ್ಮಿಕ ನಾಯಕರಲ್ಲ, ಭಾಷಾ ಮತ್ತು ಪ್ರಾದೇಶಿಕ ಗಡಿಗಳನ್ನು ಮೀರಿ ಶರಣ ತತ್ವವನ್ನು ಹರಡುವ ಅವರ ಪ್ರಯತ್ನಗಳು ಅವರ ಸಮರ್ಪಣೆಗೆ ಸಾಕ್ಷಿಯಾಗಿವೆ,'' ಎಂದು ಶ್ಲಾಘಿಸಿದರು.

''ಅವರು ಸ್ಥಾಪಿಸಿದ ಸಂಸ್ಥೆ ಇಂದು 60ಕ್ಕೂ ಹೆಚ್ಚು ಶಾಖೆಗಳ ಮೂಲಕ ವಿಶಾಲ ಜಾಲವಾಗಿ ಬೆಳೆದು, 20,000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದೆ. ಅವರ ಮಹಾನ್ ತತ್ವದಿಂದ ಪ್ರೇರಣೆ ಪಡೆದು ನಾವು ಹೆಚ್ಚು ಕರುಣೆಯುಕ್ತ ಸಮಾನತೆಯುಕ್ತ ಮತ್ತು ನ್ಯಾಯಯುತ ಸಮಾಜ ನಿರ್ಮಾಣಕ್ಕೆ ತೊಡಗೋಣ,'' ಎಂದು ಆಶಿಸಿದರು.

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ರಾಜ್ಯಸಭೆ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಮಾತನಾಡಿದರು. ಸಚಿವ ರಹೀಂ ಖಾನ್, ಸಂಸದ ಸಾಗರ್, ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ, ಗದಗ ಡಾ.ಸಿದ್ದರಾಮ ಸ್ವಾಮೀಜಿ, ಗುರುಬಸವ ದೇವರು, ಶಶಿಧರ ಕೋಸಂಬೆ ಇದ್ದರು.

ಭಾಲ್ಕಿಯಲ್ಲಿ ನಡೆದ ಅಮೃತ ಮಹೋತ್ಸವದಲ್ಲಿ ಡಾ.ಬಸವಲಿಂಗ ಪಟ್ಟದ್ದೇವರು ಅವರನ್ನು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸನ್ಮಾನಿಸಿ ಅಭಿನಂದಿಸಿದರು. ಸಚಿವರಾದ ಈಶ್ವರ ಖಂಡ್ರೆ, ರಹೀಂಖಾನ್, ಸಂಸದ ಸಾಗರ ಖಂಡ್ರೆ, ಶಶಿಧರ ಕೋಸಂಬೆ ಇತರರು ಇದ್ದರು.

ಕನ್ನಡದಲ್ಲಿ ಮಾತನಾಡಿದ ರಾಧಾಕೃಷ್ಣನ್!

ಪಟ್ಟದ್ದೇವರ ಅಮೃತ ಮಹೋತ್ಸವದಲ್ಲಿ ಉಪರಾಷ್ಟ್ರಪತಿ ರಾಧಾಕೃಷ್ಣನ್ ಅವರು ಕನ್ನಡದಲ್ಲಿ ''ಸಹೋದರ ಮತ್ತು ಸಹೋದರಿಯರೆ ಹೇಗಿದ್ದೀರಿ, ಚೆನ್ನಾಗಿದ್ದೀರಾ, ಎಲ್ಲರಿಗೂ ನಮಸ್ಕಾರ,'' ಎಂದು ಹೇಳಿದಾಗ ಸಭಿಕರು ಚಪ್ಪಾಳೆ ತಟ್ಟಿ ಅಭಿನಂದಿಸಿದರು.

ವೇದಿಕೆಯಲ್ಲೇ ಖರ್ಗೆಗೆ ತಿವಿದ ಉಪರಾಷ್ಟ್ರಪತಿ

ಪ್ರಧಾನಿ ಮೋದಿ ಅವರನ್ನು ಭಯೋತ್ಪಾದಕ ಎಂದಿದ್ದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ವೇದಿಕೆಯಲ್ಲೇ ತಿವಿದ ಉಪರಾಷ್ಟ್ರಪತಿ ರಾಧಾಕೃಷ್ಣನ್ ಅವರು, ''ಖರ್ಗೆ ಅವರು ಕರಿಯರು ಮತ್ತು ಬಿಳಿಯರ ನಡುವೆ ವ್ಯತ್ಯಾಸ ಮಾಡುವುದಿಲ್ಲ. ಅದೇ ರೀತಿ ಕೆಲವೊಮ್ಮೆ ಭಯೋತ್ಪಾದಕರು ಮತ್ತು ಭಯೋತ್ಪಾದಕರಿಗೆ ಟೆರರ್ ಆಗಿರುವವರ ನಡುವೆಯೂ ಕೂಡ ವ್ಯತ್ಯಾಸ ಮಾಡುವುದಿಲ್ಲ ಅಂತ ನನಗೆ ಅನಿಸುತ್ತಿದೆ,'' ಎಂದರು. ''ಖರ್ಗೆ ಮತ್ತು ನಮ್ಮ ವಿಚಾರಧಾರೆಗಳಲ್ಲಿ ಅಲ್ಪ ಮಟ್ಟಿನ ವ್ಯತ್ಯಾಸವಿದೆ. ಆದರೆ ನಾವಿಬ್ಬರೂ ಒಳ್ಳೆಯ ಸ್ನೇಹಿತರು,'' ಎಂದರು.

ದೇಶಾದ್ಯಂತ ಬಸವ ಜಯಂತಿ ಆಚರಿಸಿ

ವಿಶ್ವಗುರು ಬಸವಣ್ಣನವರು ಒಂದು ರಾಜ್ಯಕ್ಕೆ ಸೀಮಿತವಾಗಿಲ್ಲ, ಅವರ ವಿಚಾರಗಳು ವಿಶ್ವಕ್ಕೆ ಯಾವತ್ತೂ ಅತ್ಯಂತ ಪ್ರಸ್ತುತವಾಗಿವೆ. ಈ ನಿಟ್ಟಿನಲ್ಲಿ ಕೇಂದ್ರ ಸರಕಾರ ದೇಶದಾದ್ಯಂತ ಬಸವ ಜಯಂತಿ ಆಚರಿಸಲು ಕ್ರಮ ಜರುಗಿಸಬೇಕು ಎಂದು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ಡಾ.ಬಸವಲಿಂಗ ಪಟ್ಟದ್ದೇವರು ಕೋರಿದರು.

ಡಾ. ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವದ ಮೂಲಕ ಒಂದು ಮೈಲಿಗಲ್ಲನ್ನು ಆಚರಿಸುತ್ತಿದ್ದೇವೆ. ಸತ್ಯ, ಸೇವೆ ಮತ್ತು ಮಾನವತೆಗೆ ಸಮರ್ಪಿತ ಜೀವನವನ್ನು ನಾವು ಗೌರವಿಸುತ್ತಿದ್ದೇವೆ. ಮಾನವತೆಗೆ ದಾರಿದೀಪರಾಗಿರುವ ಅವರ ಪಾವನತೆಗೇ ಗೌರವಪೂರ್ಣ ನಮನ ಅರ್ಪಿಸುತ್ತೇನೆ.
- ಸಿ.ಪಿ. ರಾಧಾಕೃಷ್ಣನ್ ಉಪರಾಷ್ಟ್ರಪತಿ

ಲೋಕಾಯುಕ್ತ ಬಲೆಗೆ ಪಿಎಸ್‌ಐ, ಕಾನ್‌ಸ್ಟೆಬಲ್

ಬಾಗಲಕೋಟೆ: ಹಣ ಕೊಡದಿದ್ದರೆ ಕೇಸ್ ದಾಖಲಿಸುವುದಾಗಿ ಬೆದರಿಸಿ ಲಂಚ ಪಡೆಯುತ್ತಿದ್ದ ಪಿಎಸ್‌ಐ ಹಾಗೂ ಕಾನ್‌ಸ್ಟೆಬಲ್ ಲೋಕಾಯುಕ್ತರ ಬಲೆಗೆ ಬುಧವಾರ ಬಿದ್ದಿದ್ದಾರೆ.

ಜಿಲ್ಲೆಯ ಕೆರೂರ ಠಾಣೆಯ ಪಿಎಸ್‌ಐ ಭೀಮಪ್ಪ ರಬಕವಿ, ಕಾನ್‌ಸ್ಟೆಬಲ್ ಸಂತೋಷ ಬಿರಾದಾರ ಅವರು 1.70 ಲಕ್ಷ ರೂ. ಪಡೆಯುತ್ತಿದ್ದಾಗ ಬಂಧಿಸಲಾಗಿದೆ.

ಮುತ್ತಪ್ಪ ನಾಯ್ಕರ್ ಮತ್ತು ಅವರ ಸ್ನೇಹಿತ ಶಂಕ್ರಪ್ಪ ಬೂದಿಹಾಳ ಅವರನ್ನು ಪಿಎಸ್‌ಐ ಭೀಮಪ್ಪ ಏ.17ರಂದು ಠಾಣೆಗೆ ಕರೆದೊಯ್ದಿದ್ದರು. ಇಸ್ಪೀಟ್ ಹಾಗೂ ಬಡ್ಡಿ ವ್ಯವಹಾರದ ಕುರಿತು ಪ್ರಶ್ನಿಸಿದ್ದರು. ಈ ವೇಳೆ ಬೈಕ್ ತಮ್ಮ ವಶದಲ್ಲಿಟ್ಟುಕೊಂಡಿದ್ದ ಅವರು ಮತ್ತು ಕಾನ್‌ಸ್ಟೆಬಲ್ ಸಂತೋಷ ''1.70 ಲಕ್ಷ ರೂ. ಕೊಟ್ಟರೆ ಬೈಕ್ ಕೊಡುತ್ತೇವೆ, ಇಲ್ಲವಾದರೆ ದೂರು ದಾಖಲಿಸುತ್ತೇವೆ,'' ಎಂದು ಬೆದರಿಕೆ ಹಾಕಿದ್ದರು.

ಈ ಬಗ್ಗೆ ಮುತ್ತಪ್ಪ ನಾಯ್ಕರ್ ಲೋಕಾಯುಕ್ತ ಠಾಣೆಗೆ ದೂರು ನೀಡಿದ್ದರು. ಲಂಚ ಪಡೆಯುತ್ತಿದ್ದ ವೇಳೆ ದಾಳಿ ನಡೆದಿತ್ತು. ಎಸ್‌ಪಿ ಎಂ.ಬಿ.ನಂದಗಾವಿ ನೇತೃತ್ವದಲ್ಲಿ ಡಿಎಸ್‌ಪಿ ಸುರೇಶ ರೆಡ್ಡಿ ಹಾಗೂ ಸಿಬ್ಬಂದಿ ದಾಳಿ ನಡೆಸಿದಾಗ ಸಿಕ್ಕಿಬಿದ್ದರು.

ಇಂದಿನಿಂದ ಮೇ 22ರ ತನಕ ಕಾಲುಬಾಯಿ ಲಸಿಕೆ ಅಭಿಯಾನ

1.14 ಕೋಟಿ ಜಾನುವಾರಿಗೆ ಲಸಿಕೆ ಗುರಿ

■ **ಮುಹಮ್ಮದ್ ಆರಿಫ್** ಮಂಗಳೂರು
mahammed.arif@timesofindia.com

ಕಾಯಿಲೆಮುಕ್ತ ಜಾನುವಾರುಗಳಿಂದ ಉತ್ತಮ ಹಾಲು ಉತ್ಪಾದಿಸುವ ಮೂಲಕ ರೈತರನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಒಂಬತ್ತನೇ ಸುತ್ತಿನ ಕಾಲು ಬಾಯಿ ಲಸಿಕೆ ಅಭಿಯಾನ ರಾಜ್ಯದಲ್ಲಿ ಏ.23ರಿಂದ ಮೇ 22ರವರೆಗೆ ನಡೆಯಲಿದೆ.

2019ರಲ್ಲಿ ಪ್ರಧಾನಿ ಮೋದಿ ಘೋಷಿಸಿದ ರಾಷ್ಟ್ರೀಯ ಜಾನುವಾರು ಕಾಯಿಲೆ ನಿಯಂತ್ರಣ ಕಾರ್ಯಕ್ರಮ (ಎನ್‌ಎಡಿಸಿಪಿ)ದ ಅಡಿಯಲ್ಲಿ ವರ್ಷಕ್ಕೆ ಎರಡು ಬಾರಿ ಕೇಂದ್ರ ಸರಕಾರ ಅನುದಾನದಲ್ಲಿ ಅಭಿಯಾನ ನಡೆಯುತ್ತಿದೆ. ದೇಶದ ಇತರ ರಾಜ್ಯಗಳು 4-5ನೇ ಹಂತದಲ್ಲೇ ಇವೆ. ಕರ್ನಾಟಕ ಮಾತ್ರ ಒಂಬತ್ತನೇ ಸುತ್ತಿನ ಅಭಿಯಾನ ಮೂಲಕ ಮುಂಚೂಣಿಯಲ್ಲಿದೆ.

ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಮತ್ತು ಹಾಲು ಉತ್ಪಾದಕರ ಒಕ್ಕೂಟದ ಸಹಯೋಗದಲ್ಲಿ ರೈತರ ಮನೆಮನೆಗೆ ತೆರಳಿ, ದನ ಮತ್ತು ಎಮ್ಮೆಗಳಿಗೆ ಸಿರಿಂಜ್ ಮೂಲಕ ಲಸಿಕೆ ನೀಡಲಾಗುತ್ತದೆ. ಇಲಾಖೆ, ಒಕ್ಕೂಟದ ಜತೆಗೆ ಮೈತ್ರಿ, ಪಶು ಸಖಿಯರಿಗೆ ತರಬೇತಿ ನೀಡಿ, ಲಸಿಕೆ ನೀಡಲು ನಿಯೋಜಿಸಲಾಗಿದೆ. ಜಿಲ್ಲಾಮಟ್ಟದ ಸಮಿತಿ, ತಾಲೂಕು ಮಟ್ಟದ ಸಮಿತಿಗಳು ಈಗಾಗಲೇ ಸಿದ್ಧತಾ ಸಭೆ, ಹಾಲು ಒಕ್ಕೂಟದ ಜತೆ ಸಂವಾದ ನಡೆಸಿ ಅಭಿಯಾನಕ್ಕೆ ಅಣಿಯಾಗಿವೆ. ಪ್ರತಿದಿನ ಲಸಿಕೆ ನೀಡಿದ ಬಳಿಕ ಸಂಜೆ ನಾಲ್ಕು ಗಂಟೆಗೆ ರಾಜ್ಯದ ಕೇಂದ್ರ ಕಚೇರಿಗೆ ವರದಿ ನೀಡಬೇಕಾಗಿದೆ.

ರಾಜ್ಯದಲ್ಲಿ ಏ.23ರಿಂದ ಮೇ 22ರ ವರೆಗೆ ಕಾಲು ಬಾಯಿ ಲಸಿಕೆ ನೀಡಲಿದ್ದು, ಲಸಿಕೆದಾರರಿಗೆ ರೈತರು ಸಹಕರಿಸಬೇಕು. ಹಿಂದೆ ಎಷ್ಟು ಬಾರಿ ಲಸಿಕೆ ಹಾಕಿಸಿದ್ದರೂ, ಮತ್ತೆ ಹಾಕಿಸಬೇಕು.
-ಡಾ.ಅರುಣ್ ಕುಮಾರ್ ಶೆಟ್ಟಿ ಉಪನಿರ್ದೇಶಕ, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ದ.ಕ.

ಕಾಲುಬಾಯಿ ಜ್ವರ: ಗೊರಸು ಕಾಲುಗಳುಳ್ಳ ಎಲ್ಲ ಪ್ರಾಣಿಗಳಿಗೆ ವೈರಸ್‌ನಿಂದ ಕಾಲುಬಾಯಿ ಜ್ವರ ಹರಡುತ್ತದೆ. ಈ ಕಾಯಿಲೆ ತಗುಲಿದ ಜಾನುವಾರು ಬದುಕಿದ್ದರೂ ಸತ್ತಂತೆ. ಗಬ್ಬ ಕಟ್ಟುವುದಿಲ್ಲ, ಹಾಲು ನೀಡುವುದು ಕಡಿಮೆಯಾಗಿ ಕ್ರಮೇಣ ನಿಂತೇ ಹೋಗುತ್ತದೆ. ಹೀಗಾಗಿ ಇಂಥ ರಾಸು ರೈತರಿಗೆ ಹೊರೆ. ರೋಗ ನಿಯಂತ್ರಣಕ್ಕೆ ಲಸಿಕೆಯೇ ಪರಿಹಾರ. ಲಸಿಕೆ ಕೊಟ್ಟರೆ 1-2 ದಿನ ಜ್ವರ ಬಂದು ಹಾಲಿನ ಇಳುವರಿ ಕಡಿಮೆ ಯಾದರೂ 2-3 ದಿನದಲ್ಲಿ ಸಾಮಾನ್ಯ ಸ್ಥಿತಿಗೆ ಬರುತ್ತವೆ.

ರಾಜ್ಯದಲ್ಲಿ ಜಾನುವಾರು ಲೆಕ್ಕಾಚಾರ

(2019ರ ಜಾನುವಾರು ಗಣತಿ)

ದನಗಳ ಸಂಖ್ಯೆ	84,69,004
ಎಮ್ಮೆಗಳ ಸಂಖ್ಯೆ	29,84,560
ಲಸಿಕೆ ಗುರಿ	1,14,53,564
ಅತಿ ಹೆಚ್ಚು ಜಾನುವಾರು	
ಬೆಳಗಾವಿ	13,93,711
ಹಾಸನ	6,56,156
ಶಿವಮೊಗ್ಗ	6,39,216
ತುಮಕೂರು	5,73,298
ಮೈಸೂರು	5,14,280
ಬಳ್ಳಾರಿ	5,02,382

ಯಾವ ಪ್ರಾಣಿಗೆ?

ನಾಲ್ಕು ತಿಂಗಳಿಗಿಂತ ಹೆಚ್ಚು ಪ್ರಾಯದ ಎಲ್ಲ ಆರೋಗ್ಯವಂತ ಜಾನುವಾರುಗಳಿಗೆ ಲಸಿಕೆ ನೀಡಲಾಗುತ್ತದೆ. ಅಭಿಯಾನ ಮುಗಿದ ಬಳಿಕ ಅನಾರೋಗ್ಯ ಮತ್ತು ನಾಲ್ಕು ತಿಂಗಳಿಗಿಂತ ಸಣ್ಣ ಪ್ರಾಯದ ಜಾನುವಾರುಗಳಿಗೂ ಲಸಿಕೆ ನೀಡಲಾಗುತ್ತದೆ. ಜೀವಮಾನದಲ್ಲಿ ಪ್ರಥಮ ಬಾರಿಗೆ ಲಸಿಕೆ ನೀಡುವ ಜಾನುವಾರಿಗೆ 28 ದಿನ ಬಳಿಕ ಬೂಸ್ಟರ್ ಡೋಸ್ ನೀಡಲಾಗುತ್ತದೆ.

ಹೋಮ್‌ಸ್ಟೇಗಳಿಗೆ ಸುತ್ತೋಲೆ

ಬೆಂಗಳೂರು: ಕೊಡಗಿನ ಹೋಮ್‌ಸ್ಟೇಯಲ್ಲಿ ವಿದೇಶಿ ಮಹಿಳೆ ಮೇಲಿನ ಅತ್ಯಾಚಾರ ಪ್ರಕರಣವನ್ನು ಸರಕಾರ ಗಂಭೀರವಾಗಿ ತೆಗೆದುಕೊಂಡಿದ್ದು, ಜಾರ್ಖಂಡ್ ಮೂಲದ ಆರೋಪಿಯನ್ನು ಬಂಧಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ಇಂತಹ ಘಟನೆಯಿಂದ ರಾಜ್ಯಕ್ಕಾಗಲಿ, ಸಮಾಜಕ್ಕಾಗಲಿ ಒಳ್ಳೆಯ ಸಂದೇಶ ಕೊಡುವುದಿಲ್ಲ, ಹೊರಗಿನಿಂದ ಬಂದವರ ಮೇಲೆ ಇಂತಹ ಕೃತ್ಯ ನಡೆಯುವುದು ಒಳ್ಳೆಯ ಬೆಳವಣಿಗೆ ಅಲ್ಲ. ಪ್ರಕರಣದಲ್ಲಿ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು,'' ಎಂದು ಹೇಳಿದರು. ''ಹೋಮ್‌ಸ್ಟೇಗಳಿಗೆ ಸುತ್ತೋಲೆ ಹೊರಡಿಸಲಾಗಿದ್ದು, ಅದರ ಪ್ರಕಾರ ಮಾಲೀಕರು ನಡೆದುಕೊಳ್ಳಬೇಕು. ಯಾರು ಹೋಮ್‌ಸ್ಟೇ ನಡೆಸುತ್ತಾರೆ? ಲೈಸೆನ್ಸ್ ಇದೆಯೇ? ಹೋಮ್‌ಸ್ಟೇ ನಿರ್ವಹಣೆಯಲ್ಲಿ ಏನೆಲ್ಲಾ ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಎಸ್‌ಒಪಿ ಕೊಡಲಾಗಿದೆ. ಈ ಸೂಚನೆಗಳನ್ನು ಮೀರಿ ನಡೆದುಕೊಂಡವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಲಾಗುವುದು,'' ಎಂದರು.

ತಮಾಷೆಯೇ ತಪ್ಪಾಯ್ತು !: ಕಬಡ್ಡಿ ಪಂದ್ಯಾವಳಿ ವೇಳೆ ಬೆಟ್ಟಿಂಗ್ ಸಂಬಂಧ ತಮ್ಮ ವಿರುದ್ಧ ಎಫ್‌ಐಆರ್ ದಾಖಲಿಸಲು ಕೋರ್ಟ್ ಆದೇಶ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ್, ''ನ್ಯಾಯಾಲಯದ ಆದೇಶದ ಬಗ್ಗೆ ಹೆಚ್ಚು ಮಾತನಾಡಲು ಬಯಸುವುದಿಲ್ಲ, ಆದರೆ, ಕಬಡ್ಡಿ ಆಟ ನಡೆಯುವಾಗ ಹಳ್ಳಿಯಲ್ಲಿ ಎಲ್ಲರಂತೆ ನಾನು ಮಾತನಾಡಿದೆ. ಆದರೆ, ತಮಾಷೆಯನ್ನೂ ಮಾಡುವಂತಿಲ್ಲ ಎಂಬಂತಾಗಿದೆ,'' ಎಂದು ಬೇಸರಿಸಿಕೊಂಡರು. ''ಬಾಜಿ ಕಟ್ಟಿದ್ದು ಕಾನೂನು ದೃಷ್ಟಿಯಿಂದ ತಪ್ಪು, ಆದರೆ, ನಾನು ಯಾವ ರೀತಿ ಹೇಳಿದ್ದೇನೆ ಎಂಬುದು ಮುಖ್ಯವಾಗುತ್ತದೆ. ನಾನು ಬೆಟ್ಟಿಂಗ್ ಪ್ರಮೋಟ್ ಮಾಡಿಲ್ಲ. ಕೋರ್ಟ್‌ನಿಂದ ನೊಟೀಸ್ ಬಂದಿಲ್ಲ, ಏಕಾಏಕಿಯಾಗಿ ಆದೇಶ ಮಾಡಲಾಗಿದೆ. ಆದರೂ ಕಾನೂನು ರಕ್ಷಣೆ ಮಾಡುವ ಖಾತೆಯ ಸಚಿವನಾಗಿ ಕಾನೂನಿಗೆ ಗೌರವ ಕೊಡಬೇಕಿದೆ. ಕಾನೂನು ಏನು ಕ್ರಮ ತೆಗೆದುಕೊಳ್ಳುತ್ತದೋ, ಅದರಂತೆ ನಡೆದುಕೊಳ್ಳುತ್ತೇನೆ,'' ಎಂದು ಹೇಳಿದರು.

'ಗೌನ್' ಕಲಹ, ಪತ್ನಿಗೆ ಬೆಂಕಿ

■ **ವಿಕ ಸುದ್ದಿಲೋಕ** ಬೆಳಗಾವಿ

ಗೌನ್ ಧರಿಸುವ ವಿಚಾರಕ್ಕೆ ದಂಪತಿ ನಡುವೆ ನಡೆದ ಜಗಳ ವಿಕೋಪಕ್ಕೆ ತಿರುಗಿ ಪತಿ, ಪತ್ನಿಗೆ ಬೆಂಕಿ ಹಚ್ಚಿದ ಘಟನೆ ಬೆಳಕಿಗೆ ಬಂದಿದೆ. ತೀವ್ರ ಸುಟ್ಟಗಾಯಗಳಿಂದ ಬಳಲುತ್ತಿರುವ ಮಹಿಳೆಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಖಾನಾಪುರ ತಾಲೂಕಿನ ಹತ್ತರವಾಡ ಗ್ರಾಮದ ನಿವಾಸಿ ಕೃಷ್ಣಾ ಪರಶುರಾಮ ಪಾಟೀಲ (29) ಬಂಧಿತ. ಮಂಜುಳಾ ಪಾಟೀಲ (27) ಗಾಯಗೊಂಡವರು.

8 ವರ್ಷಗಳ ಹಿಂದೆ ಕೃಷ್ಣಾ ಮತ್ತು ಮಂಜುಳಾ ಅವರ ವಿವಾಹವಾಗಿತ್ತು. ಬಳಿಕ ಕೃಷ್ಣಾಜಿ ಕುಟುಂಬ ಸಮೇತ ಖಾನಾಪುರ ತಾಲೂಕಿನ ನಂದಗಡದ ದುರ್ಗಾನಗರದ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಈಚೆಗೆ ಪತ್ನಿ ಗೌನ್ ಧರಿಸುವುದನ್ನು ಪ್ರಶ್ನಿಸಿದ ಕೃಷ್ಣಾ ''ಇನ್ನು ಗೌನ್ ಧರಿಸಿದರೆ ಸುಮ್ಮನೆ ಬಿಡುವುದಿಲ್ಲ'' ಎಂದು ಎಚ್ಚರಿಸಿದ್ದ. ಬಳಿಕ ಪತ್ನಿಗೆ ಬೆಂಕಿ ಹಚ್ಚಿ ಸುಟ್ಟು ಕೊಲೆ ಮಾಡಲು ಯತ್ನಿಸಿದ್ದಾನೆ ಎಂದು ದೂರು ದಾಖಲಾಗಿದೆ.

ಕೃಷ್ಣಾ ಪಾಟೀಲ

ಮಂಜುಳಾ

ಗಂಭೀರವಾಗಿ ಗಾಯಗೊಂಡ ಮಂಜುಳಾ ಅವರನ್ನು ಮೊದಲಿಗೆ ಬೆಳಗಾವಿ ಜಿಲ್ಲಾಸ್ಪತ್ರೆಗೆ ದಾಖಲಿಸಿ, ಬಳಿಕ ಹೆಚ್ಚಿನ ಚಿಕಿತ್ಸೆಗೆ ಗೋವಾದ ಬಾಂಬೋಲಿಮ್ ಮೆಡಿಕಲ್ ಕಾಲೇಜು ಆಸ್ಪತ್ರೆಗೆ ರವಾನಿಸಲಾಗಿದೆ.

ಅಪಘಾತ ತಗ್ಗಿಸಿದ ರೈಲು ಹಳಿಗಳ ಆಧುನೀಕರಣ

■ **ಅಶ್ವಿನಿ ವೈಷ್ಣವ್**

ವಿಕ VIP ಲೇಖನ

ಭಾರತದಾದ್ಯಂತ ಪ್ರತಿದಿನ 25,000ಕ್ಕೂ ಹೆಚ್ಚು ರೈಲುಗಳು ಸಂಚರಿಸುತ್ತವೆ. ನಿತ್ಯ 2 ಕೋಟಿಗೂ ಹೆಚ್ಚು ಪ್ರಯಾಣಿಕರನ್ನು ಹೊತ್ತೊಯ್ಯುತ್ತವೆ. 1,37,000 ಕಿ.ಮೀ.ಗಿಂತಲೂ ಹೆಚ್ಚು ವ್ಯಾಪಿಸಿರುವ ಹಳಿಗಳ ಜಾಲದ ಮೂಲಕ ಕಲ್ಲಿದ್ದಲು, ಕಬ್ಬಿಣದ ಅದಿರು, ಧಾನ್ಯ, ಉಕ್ಕು, ಸಿಮೆಂಟ್ ಮತ್ತು ಇತರ ಸರಕುಗಳನ್ನು ಸಾಗಿಸುತ್ತವೆ.

ಈ ಸಂಪೂರ್ಣ ವ್ಯವಸ್ಥೆಯ ಕಾರ್ಯನಿರ್ವಹಿಸುವ ಅಡಿಪಾಯವೇ ರೈಲು ಹಳಿ. ಹಳಿಗಳು ಸುಸ್ಥಿತಿಯಲ್ಲಿದ್ದಾಗ ರೈಲುಗಳ ಸಂಚಾರ ಸುಗಮ. ಹಳಿಗಳು ಸರಿಯಾಗಿಲ್ಲದಿದ್ದರೆ, ವೇಗದ ಮಿತಿ ಮತ್ತು ವಿಳಂಬದಿಂದ ಹಿಡಿದು ಸುರಕ್ಷತೆಯ ಅಪಾಯಗಳವರೆಗೆ ಅನೇಕ ಸಮಸ್ಯೆಗಳು ಎದುರಾಗುತ್ತವೆ. ಹಳಿಯಲ್ಲಿನ ಬಿರುಕು, ಸಡಿಲ ಫಿಟ್ಟಿಂಗ್ ಅಥವಾ ಜಲ್ಲಿಹಾಸು ಅಡಚಣೆಗಳು ರೈಲಿನ ಚಲನೆಯ ಮೇಲೆ ಪರಿಣಾಮ ಬೀರಬಹುದು.

2014ರಿಂದ ಈವರೆಗೆ ಸುಮಾರು 55,000 ಕಿ.ಮೀ. ನವೀಕರಿಸಲಾಗಿದೆ. ಇದು ಸುರಕ್ಷತೆ ಮತ್ತು ಪ್ರಯಾಣದ ಗುಣಮಟ್ಟವನ್ನು ಸುಧಾರಿಸಿದೆ. ಹಾಗೂ ಪದೇಪದೆ ದುರಸ್ತಿ ಮಾಡುವ ಅಗತ್ಯವನ್ನು ಕಡಿಮೆ ಮಾಡಿದೆ. ಸುಮಾರು 44,000 ಕಿ.ಮೀ. ಉದ್ದದ ರೈಲ್ವೆ ಹಳಿಗಳಿಗೆ ತಲಾ 260 ಮೀಟರ್ ಉದ್ದದ 'ಲಾಂಗ್ವೆಲ್ ಪ್ಯಾನಲ್' ಅಳವಡಿಸಲಾಗಿದೆ. ಉದ್ದನೆಯ ಪ್ಯಾನಲ್‌ಗಳೆಂದರೆ ಹಳಿಗಳ ನಡುವೆ ಕಡಿಮೆ ಜೋಡಣೆ ಇರುತ್ತವೆ ಎಂದರ್ಥ. ಪ್ರಸ್ತುತ 80,000 ಕಿ.ಮೀ.ಗಿಂತಲೂ ಹೆಚ್ಚು ಹಳಿಗಳಲ್ಲಿ ಬಲವಾದ 60 ಕೆ.ಜಿ. ತೂಕದ ಹಳಿಗಳನ್ನು ಬಳಸಲಾಗುತ್ತಿದೆ. ಇದು ಹೆಚ್ಚಿನ ಭಾರ ಮತ್ತು ವೇಗವನ್ನು ತಡೆದುಕೊಳ್ಳಬಲ್ಲದು.

ಬಲವಾದ ಹಳಿಗಳನ್ನು ಅಳವಡಿಸುವುದು ಎಷ್ಟು ಮುಖ್ಯವೋ, ಸಮಸ್ಯೆಗಳನ್ನು ಮೊದಲೇ ಪತ್ತೆಹಚ್ಚುವುದೂ ಅಷ್ಟೇ ಮುಖ್ಯ. ಸುಮಾರು 4,50,000 ಕಿ.ಮೀ. ಹಳಿಗಳ ಮೇಲೆ ಅಲ್ಟ್ರಾ ಸಾನಿಕ್ ದೋಷ ಪತ್ತೆ (ಯುಎಸ್‌ಎಫ್‌ಡಿ) ಪರೀಕ್ಷೆಯನ್ನು ನಡೆಸಲಾಗಿದೆ. ಈ ತಂತ್ರಜ್ಞಾನವು ಹಳಿಗಳ ಒಳಗೆ ಕಣ್ಣಿಗೆ ಕಾಣಿಸದ ಬಿರುಕುಗಳನ್ನು ಪತ್ತೆಹಚ್ಚಲು ಸಹಾಯಮಾಡುತ್ತದೆ. ಇದರ ಪರಿಣಾಮ, ಹಳಿ ಮತ್ತು ವೆಲ್ಡಿಂಗ್ ವೈಫಲ್ಯಗಳು ಶೇ.90 ರಷ್ಟು ಕಡಿಮೆಯಾಗಿವೆ.

ಪ್ರಸ್ತುತ ಬಳಕೆಯಲ್ಲಿರುವ ಇತರ ತಾಂತ್ರಿಕ ವಿಧಾನಗಳಲ್ಲಿ 'ಫ್ಲ್ಯಾಶ್ ಬಟ್ವೆಲ್ಡ್' ಪರೀಕ್ಷೆಗಾಗಿ 'ಫೇಸ್ಡ್-ಅರೇ' ತಂತ್ರಜ್ಞಾನ, ಹೊಸ ವೆಲ್ಡ್‌ಗಳಿಗಾಗಿ ಮ್ಯಾಗ್ನೆಟಿಕ್-ಪಾರ್ಟಿಕಲ್ ತಪಾಸಣೆ ಮತ್ತು ಜಿಪಿಎಸ್ ಆಧಾರಿತ ಆಸಿಮಿಲೇಶನ್ ಮಾನಿಟರಿಂಗ್ ಸಿಸ್ಟಮ್ (ಒಎಂಎಸ್) ಸೇರಿವೆ. ಇವು ಪ್ರಯಾಣದ ಗುಣಮಟ್ಟವನ್ನು ಅಳೆಯುವುದಲ್ಲದೆ, ರೈಲ್ವೆ ಹಳಿಗಳಲ್ಲಿನ ದೋಷಪೂರಿತ ಅಥವಾ ಒರಟಾದ ಸ್ಥಳಗಳನ್ನು ನಿಖರವಾಗಿ ಪತ್ತೆ ಹಚ್ಚುತ್ತವೆ.

ರೈಲ್ವೆ ಟ್ರ್ಯಾಕ್ ಯಂತ್ರಗಳ ಸಂಖ್ಯೆಯು 2014ರಲ್ಲಿ 748 ಇದ್ದದ್ದು 2026ರ ವೇಳೆಗೆ 1,785ಕ್ಕೆ ಅಂದರೆ ದುಪ್ಪಟ್ಟಾಗಿದೆ. ಈ ಯಂತ್ರಗಳು ಟ್ಯಾಂಪಿಂಗ್, ಜಲ್ಲಿ ಹಾಸು ಸ್ವಚ್ಛಗೊಳಿಸುವಿಕೆ ಮತ್ತು ಹಳಿಗಳ ಗ್ರೈಂಡಿಂಗ್ ಕೆಲಸವನ್ನು ಹಸ್ತಚಾಲಿತ ಕೆಲಸಕ್ಕಿಂತ ಹೆಚ್ಚು ವೇಗವಾಗಿ, ಸಮರ್ಪಕವಾಗಿ ಮತ್ತು ಸಮಾನವಾಗಿ ನಿರ್ವಹಿಸುತ್ತವೆ.

ಜಲ್ಲಿಹಾಸಿನ 'ಡೀಪ್ ಸ್ಕ್ರೀನಿಂಗ್' ಪ್ರಕ್ರಿಯೆಯಲ್ಲಿ ಈ ಯಂತ್ರಗಳು ಗಮನಾರ್ಹ ಬದಲಾವಣೆ ತಂದಿವೆ. ಹಳಿಯ ಕೆಳಗಿರುವ ಈ ಜಲ್ಲಿಹಾಸು ನೀರು ಸರಾಗವಾಗಿ ಹರಿದು ಹೋಗಲು ಸಹಾಯ ಮಾಡುತ್ತದೆ. ಕಂಪನವನ್ನು ಹೀರಿಕೊಳ್ಳುತ್ತದೆ ಮತ್ತು ಹಳಿಯ ಸ್ಥಿರತೆಯನ್ನು ಕಾಪಾಡುತ್ತದೆ. ಕಾಲಕ್ರಮೇಣ, ರೈಲುಗಳ ಸತತ ಸಂಚಾರದ ತೂಕ ಮತ್ತು ಕಂಪನದಿಂದಾಗಿ ಈ ಜಲ್ಲಿಕಲ್ಲುಗಳು ಪುಡಿಯಾಗಿ ಜಲ್ಲಿಹಾಸನ್ನು ಮುಚ್ಚಿ ಹಾಕುತ್ತವೆ, ಇದರಿಂದ ಅದರ ಕಾರ್ಯಕ್ಷಮತೆ ಕಡಿಮೆಯಾಗುತ್ತದೆ. 'ಸ್ಕ್ರೀನಿಂಗ್' ಪ್ರಕ್ರಿಯೆಯು ಈ ಜಲ್ಲಿಹಾಸನ್ನು ಪುನಃ ಸುಸ್ಥಿತಿಗೆ ತರುತ್ತದೆ. ಈವರೆಗೆ ಸುಮಾರು 1 ಲಕ್ಷಕ್ಕೂ ಅಧಿಕ ಕಿ.ಮೀ.ಹಳಿಗಳಲ್ಲಿ ಈ ಕೆಲಸವನ್ನು ಹೆಚ್ಚಾಗಿ ಯಂತ್ರಗಳ ಮೂಲಕವೇ ನಿರ್ವಹಿಸಲಾಗಿದೆ.

ವಿಶೇಷವಾಗಿ ಗಂಟೆಗೆ 110 ಕಿ.ಮೀ.ಗಿಂತ ಹೆಚ್ಚಿನ ವೇಗದಲ್ಲಿ ರೈಲುಗಳು ಸಂಚರಿಸುವ ಸ್ಥಳಗಳಲ್ಲಿ ಸುಮಾರು 17,500 ಕಿ.ಮೀ. ಉದ್ದದ ಸುರಕ್ಷತಾ ಬೇಲಿ ಅಳವಡಿಸಲಾಗಿದೆ. ಇದು ಹಳಿಗಳ ಮೇಲೆ ಜನರು ಮತ್ತು ಜಾನುವಾರುಗಳ ಅತಿಕ್ರಮ ಪ್ರವೇಶವನ್ನು ತಡೆಯಲು ಸಹಾಯಮಾಡುತ್ತದೆ. ರೈಲು ಹಳಿ ಬದಲಿಸುವ 'ಪಾಯಿಂಟ್ಸ್ ಮತ್ತು ಕ್ರಾಸಿಂಗ್'ಗಳಲ್ಲಿ 36,000 'ಥಿಕ್ ವೆಬ್ ಸ್ವಿಚ್' ಅಳವಡಿಸಲಾಗಿದೆ.

ಗಂಟೆಗೆ 130 ಕಿ.ಮೀ. ಮತ್ತು ಅದಕ್ಕಿಂತ ಹೆಚ್ಚಿನ ವೇಗ ತಡೆದುಕೊಳ್ಳುವ ಹಳಿಗಳ ಪ್ರಮಾಣವು ಶೇ.6 ರಿಂದ ಶೇ.23ಕ್ಕೆ ಏರಿದೆ. 110 ಕಿ.ಮೀ.ಮೇಲ್ಪಟ್ಟು ವೇಗ ತಡೆಯುವ ಹಳಿಗಳ ಪ್ರಮಾಣವು 40 ಶೇಕಡಾದಿಂದ 80ಕ್ಕೆ ಏರಿಕೆಯಾಗಿದೆ.

ಗಂಭೀರ ರೈಲು ಅಪಘಾತಗಳ ಸಂಖ್ಯೆಯು 2014-15ರಲ್ಲಿ 135 ಇದ್ದದ್ದು 2025-26ರ ವೇಳೆಗೆ 16ಕ್ಕೆ ಇಳಿದಿದೆ. ಅಂದರೆ ಸುಮಾರು ಶೇ. 89 ರಷ್ಟು ಇಳಿಕೆ ಕಂಡಿದೆ. ವೆಬ್-ಆಧಾರಿತ ಟ್ರ್ಯಾಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್' (ಟಿಎಂಎಸ್) ಈಗ ಅಲ್ಟ್ರಾ ಸಾನಿಕ್ ಪರೀಕ್ಷೆ, ಪ್ರಯಾಣದ ಗುಣಮಟ್ಟದ ರೀಡಿಂಗ್ ಮತ್ತು ಹಳಿಯ ವಿನ್ಯಾಸದ ದತ್ತಾಂಶಗಳನ್ನು ಒಂದೇ ವೇದಿಕೆಯಲ್ಲಿ ಲಭ್ಯವಾಗುವಂತೆ ಮಾಡಿದೆ. ಇದರಿಂದ ಆದ್ಯತೆಗಳನ್ನು ನಿರ್ಧರಿಸಲು ಮತ್ತು ಸಮಯಕ್ಕೆ ಸರಿಯಾಗಿ ಕ್ರಮ ಕೈಗೊಳ್ಳಲು ಸುಲಭವಾಗಿದೆ.

(**ಲೇಖಕರು:** ರೈಲ್ವೆ, ವಾರ್ತಾ ಮತ್ತು ಪ್ರಸಾರ ಹಾಗೂ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು, ಭಾರತ ಸರಕಾರ)